# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.21-2015** **ಪಿ . ಡಬ್ಲುಃ 2**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಾಗರಾಜೇಅರಸ್<br>ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 01-10-2022. |

**ಪಾಟೀ ಸವಾಲುಃ ಶ್ರೀ.ಎನ್.ಆರ್ ವಕೀಲರಿಂದಃ**

ನಾನು 30 ವರ್ಷಗಳಿಂದ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ ನಾನು ಮಾಡಿದ ಯಾವುದೇ ದಾಖಲಾತಿಯನ್ನು ಲೆಡ್ಜರ್‌ನಲ್ಲಿ ನಮೂದು ಮಾಡುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನೋಂದಣಿಯಾದ ದಾಖಲಾತಿಗಳನ್ನು ಲೆಡ್ಜರ್‌ನಲ್ಲಿ ನಮೂದು ಮಾಡುತ್ತೇನೆ ಎಂದು ನುಡಿಯುತ್ತಾರೆ. ದಿ.26-09-2012 ರಂದು ವಾದಿ ಮತ್ತು ಪ್ರತಿವಾದಿ ನಮ್ಮ ಕಚೇರಿಗೆ ಬಂದಿದ್ದರು. ಆದರೆ ಅವರು ಬಂದ ಸಮಯ ನನಗೆ ನೆನಪಿಲ್ಲ. ನಾನು ಪತ್ರ ಬರೆಯುವ ಸಮಯ ಈ ಹಿಂದೆ ವಾದಿ ಮತ್ತು ಪ್ರತಿವಾದಿಗಳ ನಡುವೆ ಆಗಿದ್ದು ಕರಾರನ್ನು ನೋಡಿರುತ್ತೇನೆ. ಸದರಿ ದಾಖಲೆ ಯಾರಿಗೆ ನೀಡಲಾಯಿತು ಎಂದು ನನಗೆ ಗೊತ್ತಿಲ್ಲ. ದಿ.26-09-2012 ರಂದು ನಮ್ಮ ಕಚೇರಿಯಲ್ಲಿ ನಿಪಿ-1 ರ ದಾಖಲೆಯನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯೂ ವಾದಿಗೆ ಸಹಿ ಮಾಡಿ ನೀಡಿದ ಖಾಲಿ ಛಾಪಾಕಾಗದದ ಮೇಲೆ ನಾನು ನಿಪಿ-1 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಒಂದು ವೇಳೆ ದಿ.26-09-2012 ರಂದು ನಾನು ಹೇಳುವಂತೆ ನಿಪಿ-1 ಅನ್ನು ಬರೆದಿದ್ದ ಪಕ್ಷದಲ್ಲಿ ಅದನ್ನು ಲೆಡ್ಜರ್ ನಲ್ಲಿ ನಮೂದು ಮಾಡುತ್ತಿದ್ದು ನಾನು ಸದರಿ ದಿನಾಂಕದಂದು ನಿಪಿ-1 ಅನ್ನು ಬರೆಯದೇ ಇರುವ ಕಾರಣ ನಾನು ಕೇವಲ ನೋಂದಣಿ ಆದ ದಾಖಲೆಗಳನ್ನು ಮಾತ್ರ ಲೆಡ್ಜರ್ ನಲ್ಲಿ ನಮೂದು ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಛಾಪಾಕಾಗದವನ್ನು ಪ್ರತಿವಾದಿ ತಂದು ಕೊಟ್ಟಿರುತ್ತಾರೆ. ನಾನು ಹೇಳುವಂತೆ ಪ್ರತಿವಾದಿ ನಿಪಿ-1 ಛಾಪಾಕಾಗದವನ್ನು ನನಗೆ ತಂದು ಕೊಡದೇ ಇದ್ದರೂ ಸಹ ವಾದಿಗೆ ಅನುಕೂಲ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಅನ್ನು ಸಾಕ್ಷಿಗೆ ತೋರಿಸಿ ನಿಮ್ಮ ಮುಂದೆ ಸಹಿ ಮಾಡುವ ದಾಖಲೆಗಳಿಗೆ ನೀವು 1,2 ಎಂದು ನಮೂದು ಮಾಡುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ

ಪ್ರತಿವಾದಿ ಎಲ್ಲಿ ಸಹಿ ಮಾಡಬೇಕು ಎಂದು ಕೇಳಿದ್ದರಿಂದ ಎಡಭಾಗದಲ್ಲಿ ಸಹಿ ಮಾಡಬಹುದು ಎಂದು ನಾನು 1,2 ಎಂದು ಗುರುತು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ–1 ಪತ್ರ ವ್ಯವಹಾರವು ನಮ್ಮ ಕಚೇರಿಯಲ್ಲಿ ನಡೆದಿರುವುದಿಲ್ಲ ಹಾಗೂ ನಿಪಿ–1 ಕ್ಕೆ ಪ್ರತಿವಾದಿ ನನ್ನ ಸಮಕ್ಷಮ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

## (ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**